# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1038** |
| ಸದಸ್ಯರ ಹೆಸರು | : | ಶ್ರೀ ಡಿ. ಎಸ್. ಅರುಣ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರು) |
| ಉತ್ತರಿಸುವ ದಿನಾಂಕ | : | 25-08-2026 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ ಸೇರಿದಂತೆ ವಿವಿಧ ಬೆಳೆ ವಿಮಾ ಯೋಜನೆಗಳಡಿ ಇದುವರೆಗೆ ಒಟ್ಟು ಎಷ್ಟು ರೈತರು ನೋಂದಾಯಿಸಿಕೊಂಡಿದ್ದು, ಎಷ್ಟು ರೈತರು ವಿಮಾ ಪರಿಹಾರವನ್ನು ಪಡೆದಿದ್ದಾರೆ; (ಜಿಲ್ಲಾವಾರು ಹಾಗೂ ವರ್ಷವಾರು ವಿವರಗಳನ್ನು ನೀಡುವುದು)</td><td>
ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ರಾಜ್ಯದಲ್ಲಿ 2023-24, 2024-25 ಮತ್ತು 2025-26ನೇ ಸಾಲಿನಲ್ಲಿ ಒಟ್ಟು 81.03 ಲಕ್ಷ ರೈತ ಪ್ರಕರಣಗಳು ಬೆಳೆ ವಿಮೆಗೆ ನೋಂದಾಯಿಸಿಕೊಂಡಿರುತ್ತಾರೆ.
ಯೋಜನೆಯ ಮಾರ್ಗಸೂಚಿಯನ್ವಯ 2023-24, 2024-25 ಮತ್ತು 2025-26ನೇ ಸಾಲಿನ ಮುಂಗಾರು ಹಂಗಾಮಿನವರೆಗೆ ಒಟ್ಟು ಅರ್ಹ 41.80 ಲಕ್ಷ ರೈತ ಪ್ರಕರಣಗಳಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಮಂಜೂರಾಗಿರುತ್ತದೆ.
ವರ್ಷವಾರು ವಿವರ ಕೆಳಕಂಡ ಕೋಷ್ಟಕದಲ್ಲಿ ನೀಡಿದೆ.
<table>
<tr><th>ವರ್ಷ</th><th>ನೋಂದಾಯಿಸಿದ ರೈತ ಪ್ರಕರಣಗಳ ಸಂಖ್ಯೆ</th><th>ಬೆಳೆ ವಿಮೆ ಪರಿಹಾರ ಪಡೆದಿರುವ ರೈತ ಪ್ರಕರಣಗಳ ಸಂಖ್ಯೆ</th></tr>
<tr><td>2023-24</td><td>25,03,213</td><td>18,21,482</td></tr>
<tr><td>2024-25</td><td>27,04,166</td><td>12,22,555</td></tr>
<tr><td>2025-26</td><td>28,96,398</td><td>11,36,102</td></tr>
<tr><td>ಒಟ್ಟು</td><td>81,03,777</td><td>41,80,139</td></tr>
</table>
*2025-26ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಸಂಬಂಧಿಸಿದಂತೆ, ಬೆಳೆ ವಿಮೆ ಪರಿಹಾರ ಲೆಕ್ಕಾಚಾರ ಕಾರ್ಯವು ಪ್ರಗತಿಯಲ್ಲಿರುತ್ತದೆ.
ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ.
ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ<br>ಕಳೆದ ಮೂರು ವರ್ಷಗಳಲ್ಲಿ ಅಂದರೆ 2023-24, 2024-25 ಮತ್ತು 2025-26ನೇ ಸಾಲುಗಳಲ್ಲಿ 23.06 ಲಕ್ಷ ರೈತ ಪ್ರಕರಣಗಳು ನೋಂದಾಯಿಸಿಕೊಂಡಿದ್ದು, 12.92 ಲಕ್ಷ ಅರ್ಹ ರೈತ ಪ್ರಕರಣಗಳಲ್ಲಿ ಅನುಷ್ಠಾನ ವಿಮಾ ಸಂಸ್ಥೆ ವತಿಯಿಂದ ಪರಿಹಾರ ನೀಡಲಾಗಿರುತ್ತದೆ.
</td></tr>
</table>

| | | |
|---|---|---|
| | | 2025-26ನೇ ಸಾಲಿಗೆ ಅಧಿಸೂಚಿತ ರಿಸ್ಕ್ ಅವಧಿಯು ಪೂರ್ಣಗೊಂಡಿರುವ ಬೆಳೆಗಳ ವಿಮಾ ಪರಿಹಾರದ ಲೆಕ್ಕಾಚಾರ ಪ್ರಗತಿಯಲ್ಲಿದೆ.<br><br>ಜಿಲ್ಲಾವಾರು ಹಾಗೂ ವರ್ಷವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಆ) | ರಾಜ್ಯದಲ್ಲಿ ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ ಹಾಗೂ ಕೃಷಿಗೆ ಅಗತ್ಯವಿರುವ ಇತರೆ ಪರಿಕರಗಳ ಬೆಲೆ ನಿರಂತರವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ರೈತರ ಮೇಲಿನ ಉತ್ಪಾದನಾ ವೆಚ್ಚದ ಹೊರೆಯನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ರೈತರಿಗೆ ಗುಣಮಟ್ಟದ ಬೀಜ ಮತ್ತು ಗೊಬ್ಬರವನ್ನು ಸಮಂಜಸ ದರದಲ್ಲಿ ದೊರಕಿಸಲು ಕೈಗೊಂಡಿರುವ ಕ್ರಮಗಳೇನು; | **<u>ಬಿತ್ತನೆ ಬೀಜ</u>**<br><br>ಗುಣಮಟ್ಟದ ಬಿತ್ತನೆ ಬೀಜಗಳ ಸಮಂಜಸ ದರದಲ್ಲಿ ದೊರಕಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ:<br>• ರಾಜ್ಯದ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ವಿತರಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ Request for Proposal ಕರೆದು ಬೇಡಿಕೆಯನ್ವಯ ಬೀಜ ದಾಸ್ತಾನು ಮಾಡಿ ವಿತರಣೆ ಮಾಡಲಾಗುತ್ತಿದೆ.<br>• ಬಿತ್ತನೆ ಬೀಜಗಳ ಮಾರಾಟ ದರಗಳನ್ನು ನಿಗದಿಪಡಿಸುವ ಸಂದರ್ಭಗಳಲ್ಲಿ, ಬಿತ್ತನೆ ಬೀಜ ಖರೀದಿ ದರಗಳು ಹಾಗೂ ಗರಿಷ್ಠ APMC ಮಾರಾಟ ದರಗಳನ್ನು ಆಧಾರವಾಗಿ ಪರಿಗಣಿಸಲಾಗುತ್ತದೆ. ಹವಾಮಾನ ವೈಪರೀತ್ಯದಿಂದ ಬೀಜೋತ್ಪಾದನೆ ಕುಂಠಿತವಾದಂತಹ ಸಂದರ್ಭಗಳಲ್ಲಿ ಹಾಗೂ ಬರಗಾಲದ ಸಂದರ್ಭಗಳಲ್ಲಿ ಬೀಜೋತ್ಪಾದನೆ ಪ್ರಮಾಣ ಕುಂಠಿತಗೊಂಡು ಬೀಜಗಳ ಕೊರತೆ ಉಂಟಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಬಿತ್ತನೆ ಬೀಜಗಳ ದರಗಳು ಹೆಚ್ಚಾಗುವ ಸಂಭವವಿರುತ್ತದೆ. ಉತ್ತಮ ಮಳೆಯಾದ ವರ್ಷಗಳಲ್ಲಿ ಉತ್ತಮ ಇಳುವರಿ ಬಂದು ಉತ್ಪಾದನೆ ಹೆಚ್ಚಾದ ಸಂದರ್ಭಗಳಲ್ಲಿ ಬಿತ್ತನೆ ಬೀಜಗಳ ದರಗಳು ಕಡಿಮೆಯಾಗುತ್ತವೆ.<br>• ಇಲಾಖೆಯ ಕಾರ್ಯಕ್ರಮಗಳಲ್ಲಿ ವಿತರಣೆ ಮಾಡಲಾಗುವ ಬಿತ್ತನೆ ಬೀಜಗಳು ಮತ್ತು ಅವುಗಳ ದರಗಳ ವಿವರಗಳನ್ನು **ಅನುಬಂಧ-3** ದಲ್ಲಿ ಒದಗಿಸಿದೆ.<br><br>**ರಸಗೊಬ್ಬರ**<br><br>ರೈತರಿಗೆ ಕಡಿಮೆ ದರದಲ್ಲಿ ರಸಗೊಬ್ಬರಗಳು ದೊರೆಯುವಂತೆ ಮಾಡಲು ಕೇಂದ್ರ ಸರ್ಕಾರದಿಂದ ಪೋಷಕಾಂಶ ಆಧಾರಿತ ಸಬ್ಸಿಡಿ ಯೋಜನೆಯನ್ನು 2010ರಲ್ಲಿ ಜಾರಿಗೆ ತರಲಾಗಿರುತ್ತದೆ. ಕೇಂದ್ರ ಸರ್ಕಾರದ ನಿಬಂಧನೆಗೊಳಪಟ್ಟು ಡಿ.ಎ.ಪಿ, ಎಂ.ಒ.ಪಿ, ಎಸ್.ಎಸ್.ಪಿ ಮತ್ತು ಕಾಂಪ್ಲೆಕ್ಸ್ ಸಹಾಯಧನದ ರಸಗೊಬ್ಬರಗಳ ಬೆಲೆಯನ್ನು ರಸಗೊಬ್ಬರ ತಯಾರಿಕಾ ಸಂಸ್ಥೆಗಳೇ ನಿರ್ಧರಿಸುತ್ತವೆ. ಭಾರತದಲ್ಲಿ, ಯೂರಿಯಾ ಮಾತ್ರ ನಿಯಂತ್ರಿತ ರಸಗೊಬ್ಬರವಾಗಿದ್ದು, ಇದನ್ನು ಶಾಸನಬದ್ಧ ಅಧಿಸೂಚಿತ ಏಕರೂಪದ ಮಾರಾಟ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಪ್ರಸ್ತುತ ಯೂರಿಯಾದ ಗರಿಷ್ಠ ಮಾರಾಟ ಬೆಲೆಯನ್ನು ಕೇಂದ್ರ ಸರ್ಕಾರವು ನಿಯಂತ್ರಿಸುತ್ತಿದ್ದು, ಸಹಾಯಧನದ |

ರಸಗೊಬ್ಬರಗಳ ಬೆಲೆ ನಿಯಂತ್ರಣವು ರಾಜ್ಯ ಸರ್ಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ.

ಕೃಷಿಯಲ್ಲಿ ಉತ್ಪಾದನಾ ವೆಚ್ಚ ತಗ್ಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ;

- ಇಲಾಖೆಯ ವಿವಿಧ ಯೋಜನೆಗಳಡಿ ಸುಧಾರಿತ ಬೀಜಗಳ ಬಳಕೆಯನ್ನು ಉತ್ತೇಜಿಸಲು ರೈತ ಸಂಪರ್ಕ ಕೇಂದ್ರಗಳ ಮೂಲಕ ವಿವಿಧ ಬೆಳೆಗಳ ಬಿತ್ತನೆ ಬೀಜಗಳನ್ನು ಸಹಾಯಧನದಲ್ಲಿ ವಿತರಿಸಲಾಗುತ್ತಿದೆ.
- ಮಣ್ಣು ವಿಶ್ಲೇಷಣಾ ವರದಿಯನ್ವಯ ರಸಗೊಬ್ಬರಗಳ ಸಮತೋಲನಾತ್ಮಕ ಬಳಕೆಯನ್ನು ಉತ್ತೇಜಿಸಲು ಇಲಾಖೆಯ ವಿವಿಧ ಯೋಜನೆಗಳಡಿ ರೈತ ಸಂಪರ್ಕ ಕೇಂದ್ರಗಳ ಮೂಲಕ ಲಘುಪೋಷಕಾಂಶಗಳು, ಲಘುಪೋಷಕಾಂಶ ಮಿಶ್ರಣಗಳು, ಜೈವಿಕ ಮತ್ತು ಸಾವಯವ ಗೊಬ್ಬರಗಳು, ಹಸಿರೆಲೆ ಗೊಬ್ಬರ ಬೀಜಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸಲಾಗುತ್ತಿದೆ.
- ಹನಿ ಮತ್ತು ತುಂತುರು ನೀರಾವರಿ ಅಳವಡಿಕೆಗೆ ಉತ್ತೇಜಿಸಲಾಗುತ್ತಿದೆ.
- ಕಾರ್ಮಿಕರ ಕೊರತೆ ನೀಗಿಸಲು ಮತ್ತು ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಕೃಷಿ ಯಾಂತ್ರೀಕರಣ ಅಳವಡಿಕೆಯನ್ನು ಉತ್ತೇಜಿಸಲಾಗುತ್ತಿದೆ.
- ಸಮಗ್ರ ಕೀಟ & ರೋಗ ನಿರ್ವಹಣೆಗೆ ಪ್ರೇರೇಪಿಸಲಾಗುತ್ತಿದೆ.
- ಸಮಗ್ರ ಬೆಳೆ ಪದ್ಧತಿ ಅಳವಡಿಕೆ.
- ಮಣ್ಣಿನ ಫಲವತ್ತತೆಯನ್ನು ಕಾಪಾಡಲು ಸಾವಯವ ಕೃಷಿ ಪರಿಕರಗಳಾದ ಕಾಂಪೋಸ್ಟ್, ಹಸಿರೆಲೆ ಗೊಬ್ಬರ, ಜೈವಿಕ ಗೊಬ್ಬರಗಳು, ಕೃಷಿ ತ್ಯಾಜ್ಯಗಳ ಬಳಕೆಯನ್ನು ಉತ್ತೇಜಿಸಲಾಗುತ್ತಿದೆ.
- ಬೆಳೆ ಪರಿವರ್ತನೆಗೆ ಪ್ರೇರೇಪಿಸಲಾಗುತ್ತಿದೆ.
- ಆಧುನಿಕ ತಂತ್ರಜ್ಞಾನದ ಬಳಕೆ - ಹವಾಮಾನ ಮುನ್ಸೂಚನೆಗಳು, ಮೊಬೈಲ್ ಅಪ್ಲಿಕೇಶನ್‌ಗಳು, ನಿಖರ ಕೃಷಿ ಮತ್ತು ಸುಧಾರಿತ ಯಂತ್ರೋಪಕರಣಗಳ ಬಳಕೆಯನ್ನು ಉತ್ತೇಜಿಸಲಾಗುತ್ತಿದೆ.

ರೈತರಿಗೆ ಉತ್ತಮ ಗುಣಮಟ್ಟದ ರಸಗೊಬ್ಬರ ದೊರೆಯುವಂತಾಗಲು **"ರಸಗೊಬ್ಬರ ಗುಣಮಟ್ಟ ನಿಯಂತ್ರಣ ಕಾರ್ಯಕ್ರಮ"** ದಡಿ ಅಧಿಸೂಚಿತವಾಗಿರುವ ಎಲ್ಲಾ ರಸಗೊಬ್ಬರ ಪರಿವೀಕ್ಷಕರಿಗೆ ವಿವಿಧ ಶ್ರೇಣಿಗಳ ರಸಗೊಬ್ಬರಗಳ ಮಾದರಿ ಸಂಗ್ರಹಣೆಗೆ ಗುರಿಗಳನ್ನು ನಿಗದಿಪಡಿಸಲಾಗಿದ್ದು, ರಸಗೊಬ್ಬರ ಪರಿವೀಕ್ಷಕರು ಚಿಲ್ಲರೆ ರಸಗೊಬ್ಬರ ಮಾರಾಟ ಮಳಿಗೆ/ಸಗಟು ರಸಗೊಬ್ಬರ ಗೋದಾಮು/ಉತ್ಪಾದನಾ ಘಟಕಗಳಿಂದ ಮಾದರಿಗಳನ್ನು ಸಂಗ್ರಹಿಸಿ, ರಾಜ್ಯ ಸರ್ಕಾರದಿಂದ ಅಧಿಸೂಚಿತವಾಗಿರುವ ರಸಗೊಬ್ಬರ ಗುಣ ನಿಯಂತ್ರಣ ಪ್ರಯೋಗಾಲಯಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಿ, ವಿಶ್ಲೇಷಣೆಯಲ್ಲಿ ಕಳಪೆ ಎಂದು ಕಂಡುಬಂದಲ್ಲಿ, ರಸಗೊಬ್ಬರ (ನಿಯಂತ್ರಣ) ಆದೇಶ,

| | | |
|---|---|---|
| | | 1985 ಮತ್ತು ಅಗತ್ಯ ವಸ್ತುಗಳ ಕಾಯ್ದೆ, 1955ರ ಅನ್ವಯ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ರೈತರಿಗೆ ಅತ್ಯಗತ್ಯವಿರುವ ಸಹಾಯಧನದ ರಸಗೊಬ್ಬರಗಳು ನಿಗದಿಪಡಿಸಿದ ಬೆಲೆಯಲ್ಲಿ (ಎಮ್.ಆರ್.ಪಿ) ದೊರೆಯುವಂತಾಗಲು ಎಲ್ಲಾ ಮಾರಾಟ ಮಳಿಗೆಗಳ ಮುಂದೆ ಸಾರ್ವಜನಿಕರಿಗೆ ಕಾಣುವಂತೆ ದಾಸ್ತಾನು & ಬೆಲೆ ಪ್ರದರ್ಶನ ಫಲಕವನ್ನು ಕಡ್ಡಾಯವಾಗಿ ಪ್ರದರ್ಶಿಸಲು ಹಾಗೂ ಸಹಾಯಧನದ ರಸಗೊಬ್ಬರಗಳನ್ನು ಕಡ್ಡಾಯವಾಗಿ ಪಿ.ಒ.ಎಸ್ ಉಪಕರಣದ ಮೂಲಕವೇ ಮಾರಾಟ ಮಾಡಲು ಕ್ರಮವಹಿಸಲಾಗಿದೆ.<br><br>ಮುಂದುವರೆದು, ಇಲಾಖೆಯಿಂದ ಪತ್ರ ಸಂಖ್ಯೆ: ಉಕೃನಿ/(ರಗೊ&ಸಾಗೊ)/ರಗೊ/2026-27, ದಿನಾಂಕ 03.06.2026 ರನ್ವಯ ರಸಗೊಬ್ಬರಗಳನ್ನು ನಿಗದಿತ ದರದಲ್ಲಿಯೇ ಮಾರಾಟ ಮಾಡುವ ಸಂಬಂಧ ಸುತ್ತೋಲೆಯನ್ನು ಹೊರಡಿಸಲಾಗಿದೆ. ಆದಾಗ್ಯೂ, ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವ ಪ್ರಕರಣಗಳು ಕಂಡುಬಂದಲ್ಲಿ ರಸಗೊಬ್ಬರ (ನಿಯಂತ್ರಣ) ಆದೇಶ, 1985 ಮತ್ತು ಅಗತ್ಯ ವಸ್ತುಗಳ ಕಾಯ್ದೆ 1955ರ ಅನ್ವಯ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ.<br><br>**<u>ಕೀಟನಾಶಕ</u>**<br><br>ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ಪೀಡೆನಾಶಕಗಳು ರೈತರಿಗೆ ಲಭ್ಯವಾಗುವ ನಿಟ್ಟಿನಲ್ಲಿ ಅನುದಾನದ ಲಭ್ಯತೆಗೆ ಅನುಗುಣವಾಗಿ, ಪ್ರತಿ ಹೆಕ್ಟೇರಿಗೆ ರೂ.500 ರಂತೆ ಗರಿಷ್ಠ 2 ಹೆಕ್ಟೇರಿಗೆ ಸೀಮಿತಗೊಳಿಸಿ ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನೀಕರಿಸಿ ಶೇ. 50 ರ ಸಹಾಯಧನದಡಿ ರೈತರಿಗೆ ವಿತರಿಸಲಾಗುತ್ತಿದೆ. |
| ಇ) | ಬಿತ್ತನೆ ಸಮಯದಲ್ಲಿ ರೈತರಿಗೆ ಅಗತ್ಯ ಪ್ರಮಾಣದ ಪ್ರಮಾಣೀಕೃತ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳು ಸಕಾಲದಲ್ಲಿ ಲಭ್ಯವಾಗುವಂತೆ ಸರ್ಕಾರ ಯಾವ ವ್ಯವಸ್ಥೆಯನ್ನು ಮಾಡಿದೆ; ಕಳಪೆ ಬೀಜ, ನಕಲಿ ಗೊಬ್ಬರ ಮತ್ತು ಕೀಟನಾಶಕಗಳ ಮಾರಾಟ ತಡೆಯಲು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪ್ರಕರಣಗಳನ್ನು ದಾಖಲಿಸಿ ಎಷ್ಟು ಮಂದಿಯ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ; | **<u>ಬಿತ್ತನೆ ಬೀಜ</u>**<br><br>ಕೃಷಿ ಕಾರ್ಯವನ್ನು ಉತ್ತೇಜಿಸುವ ಸಲುವಾಗಿ ರಾಜ್ಯದ ಎಲ್ಲಾ ವರ್ಗದ ರೈತರಿಗೆ ಬಿತ್ತನೆ ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ ಯೋಜನೆಯಡಿ ರಿಯಾಯಿತಿ ದರಗಳಲ್ಲಿ ಬಿತ್ತನೆ ಬೀಜಗಳನ್ನು ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸದರಿ ಯೋಜನೆಗಳಡಿ ಎಲ್ಲಾ ವರ್ಗದ ರೈತರಿಗೆ ಗರಿಷ್ಠ 2 ಹೆಕ್ಟೇರ್ ಮಿತಿಯೊಳಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿರುತ್ತದೆ.<br><br>• ಪ್ರಸ್ತುತ ಹಂಗಾಮಿನಲ್ಲಿ ರಾಜ್ಯದ ರೈತರಿಗೆ ರಿಯಾಯಿತಿ ದರದಲ್ಲಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳು ಹಾಗೂ ಗುರುತಿಸಿದ ಮಾರಾಟ ಕೇಂದ್ರಗಳ ಮುಖಾಂತರ ಸಕಾಲದಲ್ಲಿ ಬಿತ್ತನೆ ಬೀಜ ದೊರಕಿಸಲು ವ್ಯವಸ್ಥೆ ಮಾಡಲಾಗಿದೆ. ರೈತರಿಗೆ ಸಮೀಪದಲ್ಲಿಯೇ ಬಿತ್ತನೆ ಬೀಜಗಳನ್ನು ದೊರಕಿಸುವ ಸಲುವಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕವೂ ಸಹ ವಿತರಣೆಗೆ ವ್ಯವಸ್ಥೆ ಮಾಡಲಾಗುತ್ತಿದೆ.<br>• ರಾಜ್ಯ ಸರ್ಕಾರದ 'ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ' ಯೋಜನೆಯಡಿ "ಬೀಜಗಳ ಪೂರೈಕೆ" |

ಕಾರ್ಯಕ್ರಮದಲ್ಲಿ 2026 ರ ಮುಂಗಾರು ಹಂಗಾಮಿನಲ್ಲಿ ದಿನಾಂಕ 20.08.2026 ರವರೆಗೆ 2.92ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ 6.35 ಲಕ್ಷ ರೈತರಿಗೆ ವಿತರಿಸಲಾಗಿರುತ್ತದೆ. ಪ್ರಸ್ತುತ ಹಂಗಾಮಿನಲ್ಲಿ ಬೀಜ ವಿತರಣೆಯು ಪ್ರಗತಿಯಲ್ಲಿದ್ದು, ಯಾವುದೇ ಬಿತ್ತನೆ ಬೀಜದ ಕೊರತೆಯಿರುವುದಿಲ್ಲ.

- ಕಳೆದ ಮೂರು ವರ್ಷಗಳಲ್ಲಿ ಕಳಪೆ ಬೀಜಕ್ಕೆ ಸಂಬಂಧಪಟ್ಟಂತೆ ದಾಖಲಾದ ಪ್ರಕರಣಗಳ ವಿವರ

| ಕ್ರ.ಸಂ. | ವರ್ಷ | ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ | ನ್ಯಾಯಾಲಯದಿಂದ ತೀರ್ಮಾನಿಸಲಾದ ಪ್ರಕರಣಗಳು / ವಿಧಿಸಲಾದ ದಂಡ |
|---|---|---|---|
| 1 | 2023-24 | 106 | 11 |
| 2 | 2024-25 | 94 | 16 |
| 3 | 2025-26 | 120 | 0 |

**ರಸಗೊಬ್ಬರ**

- ಹಂಗಾಮಿನ ಪೂರ್ವದಲ್ಲಿಯೇ ಆವರಿಸಬಹುದಾದ ಬೆಳೆಗಳ ವಿಸ್ತೀರ್ಣವನ್ನು ಆಧರಿಸಿ ಕೇಂದ್ರ ಸರ್ಕಾರಕ್ಕೆ ವಿವಿಧ ರಸಗೊಬ್ಬರಗಳ ಬೇಡಿಕೆಯನ್ನು ಸಲ್ಲಿಸಿ ಹಂಚಿಕೆಯನ್ನು ಪಡೆಯಲಾಗಿರುತ್ತದೆ.
- ಕೇಂದ್ರ ಸರ್ಕಾರದಿಂದ ಪ್ರಸಕ್ತ ಸಾಲಿಗೆ ಹಂಚಿಕೆಯಾಗಿರುವ ರಸಗೊಬ್ಬರಗಳನ್ನು ಜಿಲ್ಲೆಗಳ ಮೂರು ಹಂಗಾಮುಗಳ ಸರಾಸರಿ ಬಳಕೆಯನ್ನಾಧರಿಸಿ ಮರುಹಂಚಿಕೆ ಮಾಡಲಾಗಿದೆ.
- ಕೇಂದ್ರ ಸರ್ಕಾರದಿಂದ ಪ್ರತಿ ಮಾಹೆ ಕಂಪನಿವಾರು, ಗ್ರೇಡ್ ವಾರು ರಾಜ್ಯಕ್ಕೆ ಹಂಚಿಕೆಯಾಗುವ ರಸಗೊಬ್ಬರಗಳ ಪ್ರಮಾಣವನ್ನಾಧರಿಸಿ ಜಿಲ್ಲೆವಾರು ಸರಬರಾಜು ಯೋಜನೆಯನ್ನು ಸಿದ್ಧಪಡಿಸಿ ಸರಬರಾಜಿಗೆ ಕ್ರಮವಹಿಸಲಾಗುತ್ತಿದೆ.
- ಪ್ರತಿವಾರ ಎಲ್ಲಾ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರೊಂದಿಗೆ ವಿಡಿಯೋ ಕಾನ್ಫರೆನ್ಸ್
- ಮುಖಾಂತರ ಜಿಲ್ಲೆಗಳ ರಸಗೊಬ್ಬರ ಬೇಡಿಕೆಯನ್ನು ಪಡೆದು ಅದರನ್ವಯ ಸರಬರಾಜಿಗೆ ಕ್ರಮವಹಿಸಲಾಗುತ್ತಿದೆ.
- ಪ್ರತಿ ಮಾಹೆಯ ಬೇಡಿಕೆಯಂತೆ ರಸಗೊಬ್ಬರಗಳನ್ನು ಸರಬರಾಜು ಮಾಡಲು ನಿಯಮಿತವಾಗಿ ಕೇಂದ್ರ ಸರ್ಕಾರಕ್ಕೆ ಪತ್ರಗಳನ್ನು ಬರೆಯಲಾಗಿದೆ.
- ರಸಗೊಬ್ಬರ ತೀವ್ರ ಬೇಡಿಕೆಯ ಸಮಯದಲ್ಲಿ ರೈತರಿಗೆ ರಸಗೊಬ್ಬರವನ್ನು ಒದಗಿಸುವ ನಿಟ್ಟಿನಲ್ಲಿ ಕಾಪು ದಾಸ್ತಾನನ್ನು ನಿರ್ವಹಿಸಲಾಗುತ್ತಿದ್ದು, ದಿನಾಂಕ 18.08.2026ರಂತೆ 1.03 ಲಕ್ಷ ಮೆ.ಟನ್ ವಿವಿಧ ಗ್ರೇಡ್‌ನ ರಸಗೊಬ್ಬರ ದಾಸ್ತಾನಿರುತ್ತದೆ. ಸದರಿ ಕಾಪು

ದಾಸ್ತಾನಿನಿಂದ ಬೇಡಿಕೆಯನ್ನಾಧರಿಸಿ ಸಹಕಾರ ಸಂಘಗಳ ಮೂಲಕ ರೈತರಿಗೆ ವಿತರಿಸಲು ಕ್ರಮವಹಿಸಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಕಲಿ ಗೊಬ್ಬರ ಮಾರಾಟಕ್ಕೆ ಸಂಬಂಧಿಸಿದಂತೆ ಕೆಲವು ಪ್ರಕರಣಗಳು ದಾಖಲಾಗಿದ್ದು, ಸದರಿ ಮಾರಾಟಗಾರರ ಚಿಲ್ಲರೆ ರಸಗೊಬ್ಬರ ಮಾರಾಟ ಪರವಾನಗಿಯನ್ನು ರದ್ದುಪಡಿಸಲಾಗಿರುತ್ತದೆ. ವರ್ಷಾವಾರು ವಿವರ ಈ ಕೆಳಕಂಡಂತಿದೆ;

| ವರ್ಷ | ದಾಖಲಾದ ಪ್ರಕರಣಗಳ ಸಂಖ್ಯೆ | ರದ್ದುಗೊಳಿಸಿದ ಪರವಾನಗಿ ಸಂಖ್ಯೆ |
|---|---|---|
| 2023-24 | 02 | 02 |
| 2024-25 | 03 | 03 |
| 2025-26 | 02 | 02 |

**ಕೀಟನಾಶಕ**

ಅನುದಾನದ ಲಭ್ಯತೆಗೆ ಅನುಗುಣವಾಗಿ ಪೀಡೆನಾಶಕಗಳನ್ನು ರೈತರಿಗೆ ಸಹಾಯಧನದಡಿ ಒದಗಿಸುವುದರ ಜೊತೆಗೆ ಉತ್ತಮ ಗುಣಮಟ್ಟದ ಪೀಡೆನಾಶಕಗಳು ರೈತರಿಗೆ ಲಭ್ಯವಾಗುವ ನಿಟ್ಟಿನಲ್ಲಿ ಕೆಳಕಂಡಂತೆ ಕ್ರಮಗಳನ್ನು ವಹಿಸಲಾಗಿರುತ್ತದೆ.

ಹೋಬಳಿ, ತಾಲ್ಲೂಕು, ವಿಭಾಗೀಯ ಹಾಗೂ ಜಿಲ್ಲಾ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕೃಷಿ ಅಧಿಕಾರಿ, ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರು, ಉಪ ಕೃಷಿ ನಿರ್ದೇಶಕರು ಹಾಗೂ ಜಂಟಿ ಕೃಷಿ ನಿರ್ದೇಶಕರುಗಳನ್ನು ಕೀಟನಾಶಕ ಪರಿವೀಕ್ಷಕರುಗಳನ್ನಾಗಿ ಕೀಟನಾಶಕ ಕಾಯ್ದೆ ಮತ್ತು ನಿಯಮಾವಳಿಗಳನ್ವಯ ಅಧಿಸೂಚನೆಗೊಳಿಸಲಾಗಿರುತ್ತದೆ.

ರಾಜ್ಯ ಸರ್ಕಾರವು ಕೀಟನಾಶಕ ಕಾಯ್ದೆ 1968 ಮತ್ತು ಕೀಟನಾಶಕ ನಿಯಮ, 1971 ರಡಿ ಕಾಯ್ದೆ ಹಾಗೂ ನಿಯಮಗಳ ಉಲ್ಲಂಘನೆಗಳಿಗೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ರಾಜ್ಯದಲ್ಲಿ ಅಪರ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ಜಾಗೃತಕೋಶ ರಚಿಸಲಾಗಿರುತ್ತದೆ ಮತ್ತು ಇವರ ಅಧೀನದಲ್ಲಿ ರಾಜ್ಯದ 4 ವಿಭಾಗಗಳಲ್ಲಿ (ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿ) ಜಂಟಿ ಕೃಷಿ ನಿರ್ದೇಶಕರು (ಜಾಗೃತ ಕೋಶ) ಕಾರ್ಯನಿರ್ವಹಿಸುತ್ತಿದ್ದಾರೆ.

ಅಧಿಸೂಚಿಸಿರುವ ಕೀಟನಾಶಕ ಪರಿವೀಕ್ಷಕರು ಅವರ ವ್ಯಾಪ್ತಿಯಲ್ಲಿನ ಕೀಟನಾಶಕ ಮಾರಾಟ ಮಳಿಗೆ/ ಉತ್ಪಾದನಾ ಘಟಕಗಳಿಗೆ ನಿಯಮಿತವಾಗಿ ಭೇಟಿ ನೀಡಿ, ಪರಿಶೀಲನೆಯನ್ನು ಕೈಗೊಂಡು ಕಾಯ್ದೆ ಮತ್ತು ನಿಯಮಗಳ ಉಲ್ಲಂಘನೆ ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.

<table>
<tr>
<td></td>
<td></td>
<td>ಕಳೆದ ಮೂರು ವರ್ಷಗಳಲ್ಲಿ ಕಳಪೆ ಕೀಟನಾಶಕ ತಯಾರಕರ ಮತ್ತು ಮಾರಾಟಗಾರರ ವಿರುದ್ಧ ದಾಖಲಿಸಿದ ಪ್ರಕರಣಗಳ ವಿವರ ಕೆಳಕಂಡಂತಿದೆ.
<table>
<tr><th>ವರ್ಷ</th><th>ನ್ಯಾಯಾಲಯಗಳಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ</th><th>ಶಿಕ್ಷೆಗೊಳಗಾದ ಪ್ರಕರಣಗಳ ಸಂಖ್ಯೆ</th></tr>
<tr><td>2023-24</td><td>37</td><td>16</td></tr>
<tr><td>2024-25</td><td>30</td><td>13</td></tr>
<tr><td>2025-26</td><td>27</td><td>2</td></tr>
</table>
</td>
</tr>
<tr>
<td>ಈ)</td>
<td>ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆಯಾಗದಿರುವುದು ಹಾಗೂ ವಿದ್ಯುತ್ ವ್ಯತ್ಯಯದಿಂದ ರೈತರು ಎದುರಿಸುತ್ತಿರುವ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ನಿರಂತರ ಹಾಗೂ ನಿಗದಿತ ವಿದ್ಯುತ್ ಪೂರೈಕೆಯನ್ನು ಖಚಿತಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td>
<td>ಪ್ರಸ್ತುತ ರಾಜ್ಯದಲ್ಲಿ ರೈತರ ಪಂಪ್‌ಸೆಟ್‌ಗಳಿಗೆ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್‌ನ್ನು ಪೂರೈಸಲಾಗುತ್ತಿದೆ. ತಾಂತ್ರಿಕ ಸಾಧ್ಯತೆ ಇರುವ ಪ್ರದೇಶಗಳಲ್ಲಿ ಹಗಲಿನ ವೇಳೆಯಲ್ಲಿಯೇ ನಿರಂತರ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಮತ್ತು ತಾಂತ್ರಿಕ ಸಾಧ್ಯತೆ ಇಲ್ಲದಿರುವಲ್ಲಿ, 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್‌ನ್ನು ರಾತ್ರಿ ಮತ್ತು ಹಗಲಿನ ವೇಳೆ ಬ್ಯಾಚ್ ಗಳಲ್ಲಿ ನೀಡಲಾಗುತ್ತಿದೆ.<br><br>ಕೃಷಿ ಚಟುವಟಿಕೆಗಳಿಗೆ ಅಗತ್ಯವಿರುವ ನಿರಂತರ ಹಾಗೂ ನಿಗದಿತ ವಿದ್ಯುತ್ ಪೂರೈಕೆಯನ್ನು ಖಚಿತಪಡಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:<br><br>• ಕೃಷಿ ಹೊರೆಯ ವೇಗವಾಗಿ ಹೆಚ್ಚುತ್ತಿರುವ ಪ್ರದೇಶಗಳನ್ನು ಮುಂಚಿತವಾಗಿ ಗುರುತಿಸಿ, ವಿದ್ಯುತ್ ಬೇಡಿಕೆಗೆ ಅನುಗುಣವಾಗಿ ಅಗತ್ಯವಿರುವ ಉಪಕೇಂದ್ರ, ಮಾರ್ಗಗಳು ಹಾಗೂ ಇತರ ವಿದ್ಯುತ್ ಮೂಲಸೌಕರ್ಯಗಳನ್ನು ಸಮಯಕ್ಕೆ ಸರಿಯಾಗಿ ನಿರ್ಮಿಸಿ/ ಬಲಪಡಿಸಲಾಗುತ್ತಿದೆ.<br><br>• ಕುಸುಮ್-ಸಿ ಯೋಜನೆಯಡಿ ವಿಕೇಂದ್ರೀಕೃತ ನವೀಕರಿಸಬಹುದಾದ ಇಂಧನ (RE) ವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಮೂಲಕ ಉಪಕೇಂದ್ರಗಳು ಹಾಗೂ ಕೃಷಿ ಹೊರೆ ಇರುವ ಪ್ರದೇಶಗಳ ಸಮೀಪದಲ್ಲೇ ವಿದ್ಯುತ್ ಉತ್ಪಾದನೆ ಮತ್ತು ಲಭ್ಯತೆಯನ್ನು ಹೆಚ್ಚಿಸುವ ಕ್ರಮ ಕೈಗೊಳ್ಳಲಾಗಿದೆ. ಇದರಿಂದ, ಕೃಷಿ ಮಾರ್ಗಗಳಿಗೆ ಹಗಲು ವೇಳೆಯಲ್ಲಿ ಅಗತ್ಯ ಪ್ರಮಾಣದ ವಿದ್ಯುತ್ ಪೂರೈಕೆ ಮಾಡಲು ಅನುಕೂಲವಾಗುತ್ತದೆ.<br><br>• ಮುಂದುವರೆದು, ರಾಜ್ಯದ ವಿವಿಧ ವರ್ಗಗಳ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಅಗತ್ಯವಿದ್ದಲ್ಲಿ ವಿದ್ಯುತ್ ವಿನಿಮಯದ ಮೂಲಕ ಬೇಡಿಕೆಗೆ ತಕ್ಕಂತೆ ಖರೀದಿ ಮಾಡಲಾಗುತ್ತಿದೆ.</td>
</tr>
</table>

*ಕಡತ ಸಂಖ್ಯೆ: ಕೃಇ 219 ಎಂಎಸ್ 2026*

P. M. Narendraswamy

(ಪಿ.ಎಂ.ನರೇಂದ್ರಸ್ವಾಮಿ)
ಕೃಷಿ ಸಚಿವರು

# ಅನುಬಂಧ-1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1038ಕ್ಕೆ ಅನುಬಂಧ

**2023-24 ನೇ ಸಾಲಿನಿಂದ 2025-26 ನೇ ಸಾಲಿನ ವರೆಗೆ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ನೋಂದಾಯಿಸಿಕೊಂಡ ಮತ್ತು ಬೆಳೆ ವಿಮೆ ಪರಿಹಾರವನ್ನು ಪಡೆದಿರುವ ರೈತ ಪ್ರಕರಣಗಳ ಸಂಖ್ಯೆಯ ಜಿಲ್ಲಾವಾರು ಹಾಗೂ ವರ್ಷವಾರು ವಿವರ**

| ಕ್ರ. ಸಂ. | ಜಿಲ್ಲೆ | 2023-24 | | 2024-25 | | 2025-26 | |
|---|---|---|---|---|---|---|---|
| | | ನೋಂದಾಯಿಸಿದ ರೈತ ಪ್ರಕರಣಗಳ ಸಂಖ್ಯೆ | ಬೆಳೆ ವಿಮೆ ಪರಿಹಾರ ಪಡೆದಿರುವ ರೈತ ಪ್ರಕರಣಗಳ ಸಂಖ್ಯೆ | ನೋಂದಾಯಿಸಿದ ರೈತ ಪ್ರಕರಣಗಳ ಸಂಖ್ಯೆ | ಬೆಳೆ ವಿಮೆ ಪರಿಹಾರ ಪಡೆದಿರುವ ರೈತ ಪ್ರಕರಣಗಳ ಸಂಖ್ಯೆ | ನೋಂದಾಯಿಸಿದ ರೈತ ಪ್ರಕರಣಗಳ ಸಂಖ್ಯೆ | ಬೆಳೆ ವಿಮೆ ಪರಿಹಾರ ಪಡೆದಿರುವ ರೈತ ಪ್ರಕರಣಗಳ ಸಂಖ್ಯೆ* |
| 1 | ಬಾಗಲಕೋಟೆ | 32833 | 19501 | 54824 | 35754 | 136755 | 10103 |
| 2 | ಬಳ್ಳಾರಿ | 10647 | 5448 | 21582 | 8491 | 18855 | 5180 |
| 3 | ಬೆಳಗಾವಿ | 62221 | 40639 | 111673 | 40144 | 185247 | 56858 |
| 4 | ಬೆಂಗಳೂರು ಗ್ರಾ. | 25595 | 9112 | 5710 | 1947 | 5643 | 453 |
| 5 | ಬೆಂಗಳೂರು ದಕ್ಷಿಣ | 12556 | 6442 | 7040 | 5106 | 6842 | 1982 |
| 6 | ಬೆಂಗಳೂರು ನಗರ | 1190 | 128 | 458 | 172 | 303 | 104 |
| 7 | ಬೀದರ್ | 264216 | 124914 | 198755 | 22334 | 213950 | 179872 |
| 8 | ಚಾಮರಾಜನಗರ | 20299 | 3592 | 10415 | 5140 | 11094 | 1213 |
| 9 | ಚಿಕ್ಕಬಳ್ಳಾಪುರ | 49405 | 44318 | 74599 | 52197 | 80591 | 11621 |
| 10 | ಚಿಕ್ಕಮಗಳೂರು | 6961 | 3531 | 10601 | 1735 | 6556 | 1711 |
| 11 | ಚಿತ್ರದುರ್ಗ | 108916 | 89800 | 151386 | 33704 | 115419 | 52728 |
| 12 | ದಕ್ಷಿಣಕನ್ನಡ | 408 | 80 | 496 | 181 | 388 | 65 |
| 13 | ದಾವಣಗೆರೆ | 51395 | 48570 | 85654 | 50615 | 78774 | 17734 |
| 14 | ಧಾರವಾಡ | 146202 | 128504 | 171077 | 52468 | 132291 | 40514 |
| 15 | ಗದಗ | 224545 | 210689 | 295753 | 171182 | 334968 | 111810 |
| 16 | ಹಾಸನ | 123820 | 62150 | 128608 | 54433 | 113540 | 16019 |
| 17 | ಹಾವೇರಿ | 452068 | 333413 | 360063 | 195914 | 394286 | 82126 |
| 18 | ಕಲಬುರಗಿ | 169273 | 165273 | 208306 | 207360 | 322581 | 291144 |
| 19 | ಕೊಡಗು | 213 | 93 | 623 | 382 | 379 | 161 |
| 20 | ಕೋಲಾರ | 26148 | 12979 | 19239 | 9891 | 9033 | 2231 |
| 21 | ಕೊಪ್ಪಳ | 118992 | 84508 | 114330 | 39844 | 110656 | 32571 |
| 22 | ಮಂಡ್ಯ | 137032 | 89496 | 103164 | 54144 | 44888 | 8365 |
| 23 | ಮೈಸೂರು | 7405 | 3781 | 10539 | 2281 | 7162 | 971 |
| 24 | ರಾಯಚೂರು | 79054 | 8641 | 37098 | 13557 | 54322 | 6129 |
| 25 | ಶಿವಮೊಗ್ಗ | 41560 | 41203 | 46736 | 22452 | 38520 | 5545 |
| 26 | ತುಮಕೂರು | 104718 | 92188 | 157169 | 6389 | 77848 | 21417 |
| 27 | ಉಡುಪಿ | 1458 | 435 | 2650 | 1023 | 1544 | 231 |
| 28 | ಉತ್ತರಕನ್ನಡ | 51362 | 27893 | 55630 | 7545 | 51376 | 6185 |
| 29 | ವಿಜಯನಗರ | 52378 | 49378 | 104784 | 66445 | 184193 | 62736 |
| 30 | ವಿಜಯಪುರ | 109988 | 105482 | 144561 | 56612 | 145078 | 102413 |
| 31 | ಯಾದಗಿರಿ | 10355 | 9301 | 10643 | 3113 | 13316 | 5910 |
| | **ಒಟ್ಟು** | **2503213** | **1821482** | **2704166** | **1222555** | **2896398** | **1136102** |

**ಷರಾ: 2025-26 ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ವಿಮೆ ಪರಿಹಾರ ಲೆಕ್ಕಾಚಾರ ಪ್ರಕ್ರಿಯೆಯು ಪ್ರಗತಿಯಲ್ಲಿದೆ.**

ಅನುಬಂಧ-2

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1038ಕ್ಕೆ ಅನುಬಂಧ

**ಕಳೆದ ಮೂರು ವರ್ಷಗಳಲ್ಲಿ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಇದುವರೆಗೆ ರೈತರು ನೋಂದಾಯಿಸಿಕೊಂಡ, ವಿಮಾ ಪರಿಹಾರವನ್ನು ಪಡೆದ ಜಿಲ್ಲಾವಾರು ಹಾಗೂ ವರ್ಷವಾರು ವಿವರ**

| ಕ್ರ.ಸಂ | ವರ್ಷ | 2023-24 | | 2024-25 | | 2025-26 | |
|---|---|---|---|---|---|---|---|
| | ಜಿಲ್ಲೆ | ನೋಂದಾಯಿಸಿಕೊಂಡ ರೈತ ಪ್ರಕರಣಗಳ ಸಂಖ್ಯೆ | ಪರಿಹಾರ ಪಡೆದ ಅರ್ಹ ರೈತ ಪ್ರಕರಣಗಳ ಸಂಖ್ಯೆ | ನೋಂದಾಯಿಸಿಕೊಂಡ ರೈತ ಪ್ರಕರಣಗಳ ಸಂಖ್ಯೆ | ಪರಿಹಾರ ಪಡೆದ ಅರ್ಹ ರೈತ ಪ್ರಕರಣಗಳ ಸಂಖ್ಯೆ | ನೋಂದಾಯಿಸಿಕೊಂಡ ರೈತ ಪ್ರಕರಣಗಳ ಸಂಖ್ಯೆ | ಪರಿಹಾರ ಪಡೆದ ಅರ್ಹ ರೈತ ಪ್ರಕರಣಗಳ ಸಂಖ್ಯೆ |
| 1 | ಬಾಗಲಕೋಟೆ | 5505 | 5397 | 5302 | 4534 | 6192 | |
| 2 | ಬಳ್ಳಾರಿ | 60 | 36 | 167 | 96 | 248 | |
| 3 | ಬೆಳಗಾವಿ | 9538 | 9385 | 8719 | 8376 | 10785 | |
| 4 | ಬೆಂಗಳೂರು ಗ್ರಾಮಾಂತರ | 709 | 688 | 1055 | 1037 | 1209 | |
| 5 | ಬೆಂಗಳೂರು ನಗರ | 110 | 109 | 30 | 30 | 57 | |
| 6 | ಬೀದರ್ | 507 | 248 | 293 | 150 | 161 | |
| 7 | ಚಾಮರಾಜನಗರ | 19 | 14 | 12 | 3 | 11 | |
| 8 | ಚಿಕ್ಕಬಳ್ಳಾಪುರ | 2804 | 2710 | 3336 | 3305 | 4457 | |
| 9 | ಚಿಕ್ಕಮಗಳೂರು | 39009 | 37999 | 70506 | 65687 | 86517 | |
| 10 | ಚಿತ್ರದುರ್ಗ | 5003 | 4824 | 5780 | 5498 | 7304 | |
| 11 | ದಕ್ಷಿಣ ಕನ್ನಡ | 228621 | 225329 | 332750 | 326468 | 443380 | |
| 12 | ದಾವಣಗೆರೆ | 7880 | 7624 | 18687 | 18455 | 25037 | |
| 13 | ಧಾರವಾಡ | 10768 | 10704 | 10267 | 9923 | 12873 | |
| 14 | ಗದಗ | 118 | 116 | 71 | 68 | 82 | |
| 15 | ಹಾಸನ | 13496 | 12377 | 10647 | 10534 | 14268 | |
| 16 | ಹಾವೇರಿ | 23660 | 20998 | 23595 | 22220 | 30870 | 6240 |
| 17 | ಕಲಬುರಗಿ | 357 | 187 | 313 | 164 | 125 | |
| 18 | ಕೊಡಗು | 2184 | 2029 | 5711 | 5573 | 4531 | |
| 19 | ಕೋಲಾರ | 4709 | 4675 | 6191 | 6126 | 9424 | |
| 20 | ಕೊಪ್ಪಳ | 2598 | 2444 | 3035 | 2673 | 6837 | |
| 21 | ಮಂಡ್ಯ | 14 | 5 | 11 | 11 | 16 | |
| 22 | ಮೈಸೂರು | 7 | 5 | 12 | 12 | 6 | |
| 23 | ರಾಯಚೂರು | 752 | 562 | 176 | 118 | 162 | |
| 24 | ರಾಮನಗರ | 11949 | 11702 | 9369 | 9267 | 16864 | |
| 25 | ಶಿವಮೊಗ್ಗ | 73271 | 67954 | 90811 | 88564 | 127413 | |
| 26 | ತುಮಕೂರು | 16590 | 15802 | 15150 | 13272 | 18482 | |
| 27 | ಉಡುಪಿ | 10377 | 10271 | 21371 | 21063 | 29387 | |
| 28 | ಉತ್ತರ ಕನ್ನಡ | 81676 | 80541 | 88787 | 88666 | 100005 | |
| 29 | ವಿಜಯನಗರ | 625 | 569 | 641 | 591 | 1146 | |
| 30 | ವಿಜಯಪುರ | 20948 | 20752 | 19104 | 17787 | 23173 | |
| 31 | ಯಾದಗಿರಿ | 156 | 145 | 25 | 7 | 31 | |
| **ಒಟ್ಟು** | | **574020** | **556201** | **751924** | **730278** | **981053** | **6240*** |

*- 2025-26ನೇ ಸಾಲಿಗೆ ಅಧಿಸೂಚಿತ ರಿಸ್ಕ್ ಅವಧಿಯು ಪೂರ್ಣಗೊಂಡಿರುವ ಬೆಳೆಗಳ ವಿಮಾ ಪರಿಹಾರದ ಲೆಕ್ಕಾಚಾರ ಪ್ರಗತಿಯಲ್ಲಿದೆ.

## ಅನುಬಂಧ-3

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1038ಕ್ಕೆ ಅನುಬಂಧ

### 2024 ರಿಂದ 2026 ರವರೆಗಿನ ಮುಂಗಾರು ಅವಧಿಯಲ್ಲಿ ವಿವಿಧ ಬೆಳೆಗಳ ಮಾರಾಟ ದರಗಳ ವಿವರ (ಪ್ರತಿ ಕ್ವಿಂಟಾಲ್ ಗೆ)

| ಕ್ರ. ಸಂ. | ಬೆಳೆ | ಮುಂಗಾರು 2024 | ಮುಂಗಾರು 2025 | ಮುಂಗಾರು 2026 | ಶೇ. ವ್ಯತ್ಯಾಸ 2025ಕ್ಕೆ ಹೋಲಿಕೆ |
|---|---|---|---|---|---|
| 1 | ಸಜ್ಜೆ | 4800 | 4600 | 4600 | 0 |
| 2 | ಉದ್ದು | 15700 | 13850 | 11750 | -15.16 |
| 3 | ಅಲಸಂದೆ | 13500 | 13000 | 11750 | -9.62 |
| 4 | ಹೆಸರು | 18600 | 14000 | 12750 | -8.93 |
| 5 | ನೆಲಗಡಲೆ | 10200 | 10816 | 11833 | 9.4 |
| 6 | ಮುಸುಕಿನ ಜೋಳ | | 18500 | 20100 | 8.65 |
| 7 | ನವಣೆ | 11700 | 6950 | 6700 | -3.6 |
| 8 | ಭತ್ತ | 5025 | 4509 | 4494 | -0.33 |
| 9 | ರಾಗಿ | 6500 | 6500 | 6900 | 6.15 |
| 10 | ತೊಗರಿ | 17850 | 14085 | 13200 | -6.28 |
| 11 | ಸೋಯಾ ಅವರೆ | 7747 | 7275 | 9200 | 26.46 |
| 12 | ಸಾಮೆ | | | 6700 | |
| 13 | ಊದಲು | | 6950 | 6700 | -3.6 |
| 14 | ಸೂರ್ಯಕಾಂತಿ | 60000 | 60000 | 59769 | -0.39 |
| 15 | ಜೋಳ | 13000 | 14300 | 14750 | 3.15 |